doc-505
T.P-2

Reg No M 1229 42nd Year Sri "Satyavadi" Mysore 6—1—1958

ಸತ್ಯವಾದಿ

ಬಿಡಿ ಪ್ರತಿ 3 ಪೈ | ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಾಯುರು

ಮದರಾಸಿನಲ್ಲಿ 200 ಮಂದಿ ದ್ರವಿಡ ಮುನ್ನೇತ್ರ ಕಜಗಂನವರ ಬಂಧನ

ಮದರಾಸು 5— ಈ ಸಂಜೆ ಹೊತ್ತಿಗೆ ಮದರಾಸಿನ ಪೋಲೀಸರು 200 ಮಂದಿ ದ್ರವಿಡ ಮುನ್ನೇತ್ರ ಸಂಘದ ಸ್ವಯಂಸೇವಕರನ್ನು ಸ್ಥಾನಿಕ ಶಾಸನ ರೀತ್ಯಾ ಬಂಧಿಸಿದರು : ಇಲ್ಲಿಗೆ 50 ಮೈಲಿ ದೂರದ ಕಂಜೀವುಂ ಮತ್ತು ಚಂಗಲ್ಪಟ್ಟಿನಲ್ಲಿ 14 ಮಂದಿ ದಸ್ತಗಿರಿ ಮಾಡಲ್ಪಟ್ಟರು — 45 ಇಂಡಿಯ್ ಸಯನ್ನು ಕಾಂಗ್ರೆಸ್ಸಿನ ಅಧಿವೇಶನವನ್ನು ಉದ್ಘಾಟಿಸಲು ಬರುವ ಪ್ರಧಾನಿ ನೆಹರೂ ಮುಂದೆ ಈ ಕಜಗಂನವರು ಕಪ್ಪುಬಾವುಟ ಪ್ರದರ್ಶನ ಮಾಡಬೇಕೆಂದಿದ್ದರಿಂದ ಈ ಕಾರ್ಯಕ್ರಮ.

ಪಾಕ್ ಹೈ ಕಮಿಷನರ ಎದುರು ಪ್ರದರ್ಶನ

ಲಂಡನ್ನಿನಲ್ಲಿನ ಪಾಕಿಸ್ತಾನ ಹೈ ಕಮಿಷನರ ಮುಂದೆ ಯುವಕ ಮುಷ್ಟಿಯುದ ಗುಂಪು ಪಾಕಿಸ್ತಾನವು ಕಾಶ್ಮೀರ ವಿಷಯದಲ್ಲಿ ತಾಳಿರುವ ನೀತಿಯನ್ನು ಪ್ರತಿಭಟಿಸಿ ಪ್ರದರ್ಶನ ನಡೆಸಿದರು.

ಚೆನ್ನ ವಶ

ಅಮೃತಸರ 5— ಇಂಡಿಯಾಕ್ಕೆ ಗಡಿ ದಾಟಿ ಬಂದ ಪಾಕಿಸ್ತಾನೀ ರಾಷ್ಟ್ರಿಯ ಜಾಮಿಂ' ಅಹವದ'ನೆಂಬುವನಿಂದ ಕಸ್ಟಂಸ್ ಅಧಿಕಾರಿಗಳು 219 ತೊಲಾ ಅಕ್ರವು ಸ್ಥಾಗಿತಾಣಿಕೆ ಭಂಗಾರವನ್ನು ವಶಪಡಿಸಿಕೊಂಡ ಅವನನ್ನು ದಸ್ತಗಿರಿ ಮಾಡಿದರು

ಪಡಿತರ ಜಾರಿ

ಶ್ರೀನಗರ 4— ಕಾಶ್ಮೀರ ರಾಜ್ಯದಲ್ಲಿ ನೆರೆಹಾವಳಿ ಅಥವಾ ಹಿಮದ ಹಾವಳಿಗೆ ತ ತ್ತಾದ ಗ್ರಾಮಾಂತರಗಳಲ್ಲಿ ರೇಶನಿಂಗನ್ನು ಜಾರಿಗೆ ತರಲಾಗುವುದೆಂದು ಪ್ರಧಾನಿ ಭಕ್ಷಿ ಗುಲಾಂ ಮಹಮ್ಮದ್ ಹೇಳಿರುವರು.

ಗಡಿ ಪೋಲೀಸರ ವ್ಯಸನ

ಜಮ್ಮು 4— ಪಾಕಿಸ್ತಾನ ಪೋಲೀಸರು ಡಿಸೆಂಬರು 31 ರಂದು ಗಡಿಯ ಭಾರತ ಭಾಗದಲ್ಲಿ ಹುಲ್ಲು ಮೇಯಿಸುತ್ತಿದ್ದ ಇಬ್ಬರನ್ನು ಗದರಿಸಿ ಅವರ ಮೇಲೆ ಗುಂಡು ಹಾರಿಸಿ ಗಾಯಗೊಳಿಸಿದ್ದರು : ಅದಕ್ಕಾಗಿ ಪಾಕಿಸ್ತಾನದ ಗಡಿ ಪೋಲೀಸರು ವ್ಯಸನ ಸೂಚಿಸಿದ್ದಾರೆ

ಚದುರಂಗ ಆಡಿ

ಹೈದರಾಬಾದು 3— ಕ್ಲಬ್ಬುಗಳಲ್ಲಿ ಇಸ್ಪೀಟಿನ ಬದಲು ಚದುರಂಗ ಆಡಬೇಕೆಂದು ಆಂಧ್ರ ಮುಖ್ಯಮಂತ್ರಿ ಸಂಜೀವರೆಡ್ಡಿ ಸೂಚಿಸಿರುವರು

ದರೋಡೆ

ಶ್ರೀಕಾಕುಲಂ 1— 50 ಮಂದಿಯ ಕಳ್ಳರ ಗುಂಪು ಗಂಗುಲ ಅಪ್ಪನಾಯುರ ಮನೆಗೆ ನುಗ್ಗಿ 2 ಲಕ್ಷ ರೂಗಳ ಬೆಲೆಯ ಹಣ, ವಸ್ತ್ರಾಭರಣಗಳೊಡನೆ ಪರಾರಿಯಾದರು

ಕಾರ್ಮಿಕ ನಾಯಕನ ಬಂಧನ

ಬೊಂಬಾಯಿ 3— ತಾನು ಉಪವಾಸ ಸತ್ಯಾಗ್ರಹ ಮಾಡುವುದಾಗಿ ಭಿತ್ತಿಪತ್ರ ಹಿಡಿದುಕೊಂಡ ಹೋಗುತ್ತಿದ್ದ ಕಾರ್ಮಿಕ ನಾಯಕ ಚೌಧರಿಯವರನ್ನು ಪೋಲೀಸರು ದಸ್ತಗಿರಿ ಮಾಡಿದರು.

ಹಿಂದಿ ಭಾಷೆಗೆ ಬೇಗನೆ ಬದಲಾಗಬೇಕು

ನವದೆಹಲಿ 4— ಭಾಷಾ ಸಮಸ್ಯೆ ವಿವಾದದ ಬಗ್ಗೆ ಕೇರಳದಲ್ಲಿ ಇಂಗ್ಲೀಷಿನಿಂದ ಮಲೆಯಾಳಕ್ಕೂ, ಭಾರತದಲ್ಲಿ ಇಂಗ್ಲೀಷಿನಿಂದ ಹಿಂದಿಗೂ ಬೇಗ ಬದಲಾವಣೆಯಾಗಬೇಕೆಂದು ಕೇರಳದ ಮುಖ್ಯ ಮಂತ್ರಿ ಶ್ರೀ ಸಂಬೂದರಿಪಾದರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಭಾರತದ ನಿಶೇಧಾಜ್ಞೆ

ಮಧುರೈ 5— ಇಲ್ಲಿ ಏರ್ಪಡಿಸಲಾಗಿದ್ದ ಕಪ್ಪು ಬಾವುಟ ಪ್ರದರ್ಶನ ಮತ್ತು ಮೆರವಣಿಗೆಯನ್ನು ತಾಲ್ಲೂಕು ಮ್ಯಾಜಿಸ್ಟ್ರೇಟರು ಪ್ರತಿಬಂಧಿಸಿದರು.

ಭಾರತದ ನೆರವು

ಘನ ದೇಶವು ತನ್ನ ಗ್ರಾಮ ಕೈಗಾರಿಕಾಭಿವೃದ್ಧಿಗೆ ಭಾರತದ ನೆರವನ್ನು ಪಡೆಯಲುದೆಂದು ವರದಿಯಾಗಿದೆ.

ಪ್ರಶಸ್ತಿ

ನ್ಯೂಯಾರ್ಕ್ 2— ಪ್ರಪಂಚದಲ್ಲಿ ಬಹು ಜನಾನ್ಯಾಗಿ ಉಡುಪು ಧರಿಸುವವರಲ್ಲಿ ಬ್ರಿಟಿಷ್ ರಾಣಿ ಎಲಿಜಬೆತ್ತಿಗೆ ದೊರೆತಿದೆ ; ಅಂತರರಾಷ್ಟ್ರೀಯ 2000 ಫ್ಯಾಷನ್ನಿನ ನಿಪುಣರಿಂದ ಆರಿಸಲ್ಪಟ್ಟಿದ್ದು

ಅಂಚೆ ಪ್ರದರ್ಶನ

ಲಂಡನ್ನಿನಲ್ಲಿ 1960 ರ ಜುಲೈನಲ್ಲಿ ಬಹು ಭಾರಿ ಅಂಚೆ ಚೀಟಿ ಪ್ರದರ್ಶನ ನಡೆಸಲು ಏರ್ಪಡಿಸಲಾಗುತ್ತಿದೆ

ನೆರೆ ಹಾವಳಿಯಿಂದ ನಷ್ಟ

ಕೊಲಂಬೊ 2— ಸಿಲೋನಿನ ನೆರೆ ಹಾವಳಿಯಿಂದ ಸುಮಾರು 550 ಮಿಲಿಯ ಪೌಂಡುಗಳು ನಷ್ಟವಾಗಿದೆಯೆಂದು ಪ್ರಕಟವಾಗಿದೆ — ಭಾರತದ ವಿಮಾನ ದಳದವರು ದಿನವೂ 76000 ಪೌಂಡುಗಳ ಮೌಲ್ಯದ ಆಹಾರವನ್ನು ಸಂತ್ರಸ್ತರಿಗೆ ಹಾಕುತ್ತಿದ್ದರು.

× ಬೆಂಗಳೂರು 4— ಸಿಟಿ ಮಿಲ್ಕ್ ಸಪ್ಲೈ ಸ್ಕೀಮನ್ನು ಉದ್ಘಾಟಿಸುತ್ತಾ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ' ಶುದ್ಧವಾದ ಮತ್ತು ಬೆಣಕೆಯಿಲ್ಲದ ಹಾಲಿನ ಹೆಚ್ಚು ಉತ್ಪತ್ತಿಯೂ ಮತ್ತು ಸೇವನೆಯು ಅವಶ್ಯಕದ ಒಗ್ಗೆ ಒತ್ತಿ ಹೇಳಿದರು.

ಸುದ್ದಿಗಳು

ಎರ್ನಾಕುಲಂ 5 — ಭಾರತದಲ್ಲಿ ಕ್ರೈಸ್ತ ಮತವು ಪೋರ್ಚುಗಲ್ಲಿಗೆ ಗೋವಾದ ಮೇಲಿನ ಅಧಿಕಾರದಿಂದ ಉಳಿದಿದೆ ಎಂದು ಪೋರ್ಚುಗೀಸರು ಹೇಳುತ್ತಿರುವುದನ್ನು ಭಾರತದ 5ನೇ ಲಿಯಾ ಕ್ಯಾಥಲಿಕ್ ಕ್ರಿಶ್ಚಿಯರ್ ಸಂಘವಾದ ಕೆಥೊಲಿಕ್ ಯೂನಿಯನ್ನಿನ ಕಾರ್ಯಕರ್ತರ ಸಭೆಯು ತಿರಸ್ಕರಿಸಿರುವುದಲ್ಲದೆ, ಪೋರ್ಚುಗೀಸರು ಗೋವಾದಲ್ಲಿರುವುದು ಕ್ಯಾಥಲಿಕರಿಗೂ ಅವರ ಮತಕ್ಕೂ ತೊಂದರೆಯಾಗಿದೆ ಎಂದಿರುವುದು.

ಕಟಕ್ 4— ಗವರ್ನರು ಸುಖಕಾರ ತರ್ ಮತ್ತು ಅವರ ಪತ್ನಿಯು ಒರಿಸ್ಸಾದಲ್ಲಿ ಮತ್ತು ದೇಶದಲ್ಲಿಯು ಇತರ ಕೆಲ ಭಾಗದಲ್ಲಿ ಆಹಾರದ ತೊಂದರೆ ಇರುವ ದರಿಂದ ಇಂದಿನಿಂದ ತಮ್ಮ ಆಹಾರದಲ್ಲಿ ಅಕ್ಕಿ ಉಪಯೋಗಿಸುವುದನ್ನು ಬಿಟ್ಟು ಬಿಟ್ಟರು.

ಪಾಟ್ನಾ 4— ಬೀಹಾರು ಸರಕಾರವು ಅಲ್ಲಿಯ ಅತಿವೃಷ್ಟಿಯು ತೊಂದರೆ ಪರಿಹಾರಾರ್ಥವಾಗಿ ಭಾರತ ಸರಕಾರದಿಂದ 4 ಕೋಟಿ ರೂಗಳನ್ನು ಪಡೆವುದು.

ಪಿಲಾಂಗು 30— ಪಂ|| ನೆಹರೂರವರನ್ನು ಕೂರಿಸಿಕೊಂಡು ಭಾಗ್ಡೋಗ್ರಾ ಗ್ರಾಮಕ್ಕೆ ಬರುತ್ತಿದ್ದ ಕಾರು ಒಂದು ಆಡಿನ ಮೇಲೆ ಹರಿದು ಅದು ಸತ್ತು ಹೋಯಿತು

ಪಂಜಾಬು ರೆವಿನ್ಯೂ ಪಟವಾರಿ ಸಂಘದ ಕರೆಯಂತೆ ನಡೆಯುತ್ತಿರುವ ರಾಜ್ಯಾದ್ಯಂತ ಮುಷ್ಕರ ಸಂಬಂಧವಾಗಿ ಪಂಜಾಬಿನ 3 ಮುಖ್ಯ ನಗರಗಳಲ್ಲಿ ಶುಕ್ರವಾರ 263 ಮಂದಿ ಪಟವಾರಿಗಳು ದಸ್ತಗಿರಿ ಮಾಡಲ್ಪಟ್ಟರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂಪತ್ಕೃಷ್ಣ ಜೋಯಿಸರಿಂದ

7 ದ್ವಿತೀಯ ಪುಟ

ಹಿಂದಿ ರಾಷ್ಟ್ರ ಭಾಷೆ ಆಗಬೇಕು

— —

ಇದು ದಕ್ಷಿಣದವರ ಇಚ್ಛೆ ಎಂದು ಶ್ರೀ ದ್ವಾರಕ ಜಗದ್ಗುರುಗಳವರ ಹೇಳಿಕೆ

ರಾಯಪುರ 3 — ನಾಗಪುರದ ಬಿ ಎಸ್ ಕಾಲೇಜಿನಲ್ಲಿ ನಡೆದ ಒಂದು ಭಾರಿ ವಿದ್ಯಾರ್ಥಿ ಸಮಾವೇಶದಲ್ಲಿ, ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಅಭಿನವ ಸಚ್ಚಿದಾನಂದತೀರ್ಥ ಮಹಾ ಸ್ವಾಮಿಗಳಿಗೆ ಕೇಂದ್ರ ವಾಣಿಜ್ಯ ಮಂತ್ರಿ ಶ್ರೀ ಮುಂರ್ಜಿ ದೇಸಾಯರು ಮತ್ತು ಆರ್ ಎಸ್ ಎಸ್ ನಾಯಕ ಜವಲ್ಕರಾಜ ರವರು ಗೌರವ ಸಲ್ಲಿಸಿ, ಆಶೀರ್ವಾದ ಪಡೆದರು ಜಗದ್ಗುರುಗಳವರು ಮಾಡಿದ ಭಾಷಣದಲ್ಲಿ — ದಕ್ಷಿಣ ಭಾರತದ ನಾಯಕರು, ಇಂಗ್ಲೀಷನ್ನು ರಾಷ್ಟ್ರ ಭಾಷೆಯನ್ನಾಗಿ ಮಾಡಿ ಮುಂದುವರಿಸಿ ಕೊಂಡುಹೋಗಬೇಕೆಂದಿರುವ ಪ್ರಯತ್ನವನ್ನು ಖಂಡಿಸಿದರು, ಮತ್ತು ಇಂಗ್ಲೀಷು ವಿದೇಶೀ ಭಾಷೆಯಾದ್ದರಿಂದ ರಾಷ್ಟ್ರ ಭಾಷೆಯಾಗಲು ಪೂರ್ತಿ ಯೋಗ್ಯವಲ್ಲವೆಂದರು ; ಮತ್ತು ಈಗ ಹಿಂದಿಯು ದಕ್ಷಿಣದಲ್ಲಿ ಪರಿಚಿತವಾಗಿಯೂ ಜನಪ್ರಿಯವಾಗಿಯೂ ಆಗುತ್ತಿದ್ದು, ಹಿಂದಿಯು ರಾಷ್ಟ್ರ ಭಾಷೆಯಾಗಬೇಕೆಂದು ಸಾರ್ವಜನಿಕರು ಇಚ್ಛಿಸುತ್ತಿರುವರೆಂದೂ ತಿಳಿಸಿದರು.

ಜಗದ್ಗುರುಗಳು ಪೂರಿಗೆ 5 ನೇ ತಾರೀಖು ತಲುಪುವರು, ಮತ್ತು ಕಲ್ಕತ್ತಾವನ್ನು 8 ನೇ ತಾರೀಖು ಬೆಳಿಗ್ಗೆ ಪೂರಿ ಎಕ್ಸ್‌ಪ್ರೆಸ್‌ನಲ್ಲಿ ಬಂದು, ಗಂಗಾಸ್ನಾನಕ್ಕೆ ಪ್ರಯಾಣಬೆಳೆಸುವರು

ಶಕ್ತಿಸುಧಾ

— ಉತ್ತಮ ಟಾನಿಕ್ —

ಪತ್ರಿಕಾ ಪ್ರಕಟಣೆ

ಬೆಂಗಳೂರು 4— ಮೈಸೂರು ಸರಕಾರವು ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿ ಶಿಕ್ಷಣ ವಿಕಾಸ ಕಾರ್ಯಕ್ರಮದ ಅಂಗವಾಗಿ ವರ್ಷಕ್ಕೆ ಒಟ್ಟು 35 ಸಾವಿರ ರೂಗಳಿಗಿಂತ ಹೆಚ್ಚು ವೆಚ್ಚ ತಗಲುವ ಏಳು ಹೆಚ್ಚಿನ ಡೆವ್ಯುಟಿ ಇನ್‌ಸ್ಪೆಕ್ಟರ್ ಕಚೇರಿಗಳನ್ನು ತೆರೆಯಲು ಮಂಜೂರಿಕೊಟ್ಟಿದೆ.

ಗೋ ಸಂಪತ್ತನ್ನು ಉತ್ತಮಗೊಳಿಸಬೇಕು

ಕೋಲಾರ — ದೊಡ್ಡ ಬಳ್ಳಾಪುರ ತಾಲ್ಲೂಕಿನ ಘಾಟಿಯಲ್ಲಿ ದನಗಳ ಮತ್ತು ವ್ಯವಸಾಯ ಪ್ರದರ್ಶನವನ್ನು ಕೇಂದ್ರದ ವ್ಯವಸಾಯ ಶಾಖಾ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಉದ್ಘಾಟಿಸುತ್ತಾ — ನಮ್ಮ ದೇಶದ ಗ್ರಾಮಗಳ ಆರ್ಥಿಕ-ಜೀವನದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಗೋಸಂಪತ್ತನ್ನು ಉತ್ತಮಗೊಳಿಸಬೇಕೆಂದರು — ಭಾರತದ ಆರ್ಥಿಕ ಜೀವನದಲ್ಲಿ ಗೋ ಸಂಪತ್ತಿನ ಪ್ರಾಮುಖ್ಯತೆ ವಿಷಯವನ್ನು ಒತ್ತಿ ಹೇಳಿದರು ; ಎರಡನೇ ಯೋಜನೆಯಲ್ಲಿ 52 ಕೋಟಿ ರೂಗಳ ಗೋ ಸಂಪತ್ತಿನ ಅಭಿವೃದ್ಧಿಗಾಗಿ ಖರ್ಚು ಮಾಡಲಿರುವ ಭಾರತ ಸರಕಾರದ ಕಾರ್ಯಕ್ರಮವನ್ನು ವಿವರಿಸಿದರು — ಈ ದನಗಳ ಸಂತೆಗೆ 50 ಸಾವಿರ ದನಗಳು ಬಂದಿದ್ದವು — ಬೆಂಗಳೂರು ಗೋಕುಲದ ಶ್ರೀ ಎಂ. ಎಸ್ ರಾಮಯ್ಯನವರ ಉದಾರ ಸಹಾಯದ ಪಶು ವೈದ್ಯ ಶಾಲೆಯ ಆಸ್ಪತ್ರೆಯ ಕಟ್ಟಡವನ್ನು ಶ್ರೀ ಕೃಷ್ಣಪ್ಪನವರು ಉದ್ಘಾಟಿಸಿದರು

ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ಶ್ರೀ ಕೆ ಆರ್. ತೋಪಯ್ಯನವರು ಉದಾರ ದಾನವಾಗಿತ್ತ ಪಶುವೈದ್ಯಶಾಲೆಯ ಪ್ರಾರಂಭೋತ್ಸವವನ್ನು ಶ್ರೀ ಎಂ ವಿ ಕೃಷ್ಣಪ್ಪನವರು ನೆರವೇರಿಸಿದರು

ವುಡ್‌ಲಾಂಡ್ಸ್

ಪ್ರಶಂಸನೀಯ 11 ನೆವಾರ

ಮದರ್ ಇಂಡಿಯ

ವರ್ಣರಂಜಿತ ಹಿಂದಿ ಚಿತ್ರರತ್ನ

ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್

6-1-58 ರಿಂದ

ಚಂದ್ರಬಾಬು — ಇವಿ ಸರೋಜಾ ಪಾರ್ಟ್ ಮಾಡಿರುವ

ಅಮರಾವತಿ

(ತಮಿಳು)

[ಪ್ರತಿದಿನ 3 ಆಟಗಳು]

ಪ್ರತಿ ಶುಕ್ರವಾರ, ಶನಿವಾರ, ಭಾನುವಾರ ಬೆಳಿಗಿನ ಪ್ರದರ್ಶನ 10-30 ಕ್ಕೆ

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 1-80

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

ಅಪೆರಾ— ಜಯಪ್ರದ 3 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಜೀಲಂಗಿ ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

SHAKTI SUDHA

A Superb Tonic

Protect the cow ಗೋ ಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಚಂದಾಳಿಗರಾಗಿರಿ

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
Contract above 100 inches	1-00
500	0-75

Column width 2 inches; length 12½ inches; 4 columns to a page

The decision of the management is final in all matters

Manager "Satyavadi", Chamarajpuram, Mysore

Edited, Printed & Published by Dharma Prachara Nirata M S Krishna Rao at the Satyavadi Press Chamarajpuram Mysore